


ದೇವರೇ, ನಮ್ಮ ತಂದೆಯೇ, ನಿನ್ನ ಆತ್ಮನ ಮೂಲಕ ನಾವು ನಂಬಿಕೆ, ನಿರೀಕ್ಷೆ ಮತ್ತು  ಪ್ರೀತಿಯಲ್ಲಿ ಒಂದುಗೂಡಿಸಲ್ಪಟ್ಟಿದ್ದೇವೆ.

ಈ ಸಮಯದಲ್ಲಿ ಪ್ರತ್ಯೇಕಿಸಲ್ಪಟ್ಟಿದ್ದರೂ ನಿನ್ನ ಮಕ್ಕಳ ಜಾಗತಿಕ ಸಮುದಾಯದ ಅಂಗಗಳಾಗಿದ್ದೇವೆ.
ನಿನ್ನ ಸಾಮೀಪ್ಯದಲ್ಲಿ ಮತ್ತು ನಮ್ಮ ಸಹೋದರ ಸಹೋದರಿಯರ ಸಾಂಗತ್ಯದಲ್ಲಿ ನಮ್ಮ ವಿಶ್ವಾಸ ಬೆಳೆಯುವಂತಾಗಲಿ.
ಅಸ್ವಸ್ಥತೆಯಲ್ಲಿರುವವರನ್ನು ಬಲಗೊಳಿಸು.

ಏಕಾಂಗಿಯಾಗಿರುವವರ ಹೃದಯಗಳನ್ನು ಹಗುರಗೊಳಿಸು
ನಮ್ಮ ನಾಯಕರುಗಳಿಗೆ ಜ್ಞ್ಯಾನವನ್ನೂ ಧೈರ್ಯವನ್ನೂ ದಯಪಾಲಿಸು
ವೈದ್ಯಕೀಯ ಸೇವೆಯಲ್ಲಿರುವ ಸ್ತ್ರೀಯರನ್ನೂ ಪುರುಷರನ್ನೂ ಆಶೀರ್ವದಿಸು.

ಜಾಗತಿಕ ಸಭೆಯಲ್ಲಿರುವ ನಮ್ಮ ಸಹೋದರ, ಸಹೋದರಿಯರೊಡನೆ ನಿಲ್ಲು ನಮ್ಮ ಬಾಂಧವ್ಯವನ್ನು ವ್ಯಕ್ತಪಡಿಸುವ ವಿಚಾರಶೀಲತೆಯನ್ನು ನಮಗೆ ದಯಪಾಲಿಸು.
ದೇವರೇ, ನಮ್ಮನ್ನು ಆಶೀರ್ವದಿಸು! ನಿನ್ನ ಪ್ರಸನ್ನ ಮುಖದಿಂದ ನಮ್ಮನ್ನು ನೋಡಿ ನಮ್ಮ ಮೇಲೆ ಯಾವಾಗಲೂ ದಯವಿಡು.

ದೇವರೇ, ನಮ್ಮನ್ನು ಆಶೀರ್ವದಿಸು! ನಮ್ಮ ಸುತ್ತಲೂ ನಿನ್ನ ದೂತರನ್ನಿರಿಸು! ನಿನ್ನ ಶಾಂತಿಯಲ್ಲಿ ನಮ್ಮನ್ನು ಯಾವಾಗಲೂ ಕಾಪಾಡು.

ದೇವರೇ, ನಮ್ಮನ್ನು ಆಶೀರ್ವದಿಸು! ನಿನ್ನ ಪ್ರಸನ್ನ ಮುಖದಿಂದ ನಮ್ಮನ್ನು ನೋಡಿ ನಮ್ಮ ಮೇಲೆ ಯಾವಾಗಲೂ ದಯವಿಡು.

<u>ಐಕ್ಯತೆ – ಜಗದಗಲಕ್ಕೂ ಒಂದು ಪ್ರಾರ್ಥನೆ</u>

ಈ ಪ್ರಾರ್ಥನಾ ಸರಪಣಿಯಲ್ಲಿ ನೀವು ಸೇರುವಿರಾದರೆ, ಇದನ್ನು ಎಲ್ಲರೊಂದಿಗೆ ಹಂಚಿಕೊಳ್ಳಿರಿ. ಇಲ್ಲವೇ ಪಕ್ಕದಲ್ಲಿರುವ ಚಿತ್ರವನ್ನು ಅಚ್ಚು ಹಾಕಿ ನಿಮ್ಮ ಕಿಟಕಿಗಳಲ್ಲಿ ಇಲ್ಲವೇ ವಾಹನಗಳಲ್ಲಿ ತೂಗುಹಾಕಿರಿ. "ದೈಹಿಕವಾಗಿ ಅಗಲಿಸಲ್ಪಟ್ಟಿದ್ದರೂ ಆತ್ಮಿಕವಾಗಿ ಬಂಧಿಸಲ್ಪಟ್ಟಿದ್ದೇವೆ" ಎಂಬುದನ್ನು ನಾವು ತೋರಿಸಲಿಚ್ಛಿಸುತ್ತೇವೆ.

*(Translation: Bishop Ravi Niranjan)*